ದಿನಾಂಕಃ 13.08.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀಸವಾಲುಃ ಶ್ರೀ. ಡಿಎನ್‌ಎಸ್ ವಕೀಲರಿಂದ ಪಿರ್ಯಾದಿದಾರರ ಪರವಾಗಿ.

ಹಳೆ ಸರ್ವೆ ನಂಬರು.116ಃ3 ಹೊಸ ನಂಬರುಃ116ಃ4 ಜಮೀನಿನಲ್ಲಿ ಮೂಲತಃ ಎಷ್ಟು ಎಕರೆ ಜಮೀನನ್ನು ಖರೀದಿ ಮಾಡಿರುತ್ತೀರಿ ಎಂದರೆ 30 ಗುಂಟೆ ಜಮೀನನ್ನು ಖರೀದಿ ಮಾಡಿದ್ದೆನು. ನಾನು ಪೆದ್ದರೆಡ್ಡಿಯವರೊಂದಿಗೆ ಕ್ರಯದ ಕರಾರುಪತ್ರ ಮಾಡಿಕೊವೂಳ್ಳುವ ಪೂರ್ವದಲ್ಲಿ ಮತ್ತು ಕ್ರಯದ ಕರಾರುಪತ್ರ ಮಾಡಿಕೊಂಡ ನಂತರದಲ್ಲಿ ನಾನು ಖರೀದಿಸಿದ್ದ ಜಮೀನಲ್ಲಿ ಕೆಲವರಿಗೆ ಗುಂಟೆ ಲೆಕ್ಕದಲ್ಲಿ ಮತ್ತು ಕೆಲವರಿಗೆ ಚದರ ಅಡಿ ಲೆಕ್ಕದಲ್ಲಿ ಜಮೀನನ್ನು ಮಾರಾಟ ಮಾಡಿ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದೆನು ಎಂದರೆ ಸರಿಯಲ್ಲ. ಜಾಲಾಡಿ ಹರಿಕೃಷ್ಣ ಎಂಬುವವರಿಗೆ ದಿಃ06.08.2012ರಂದು ನಾನು ಖರೀದಿ ಮಾಡಿದ್ದ 30 ಗುಂಟೆ ಜಮೀನನ್ನು ಮಾರಾಟ ಮಾಡಿ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದೆನು ಎಂದರೆ ಸರಿ. ಸಾಕ್ಷಿ ಸ್ವತಃ ನಂತರದಲ್ಲಿ ಅದನ್ನು ರದ್ದುಪಡಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಕ್ರಯದ ಕರಾರುಪತ್ರವನ್ನು ಯಾವಾಗ ರದ್ದುಪಡಿಸಲಾಗಿರುತ್ತದೆ ಎಂದರೆ ನನಗೆ ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ. ಸದರಿ ಜಾಲಾಡಿ ಹರಿಕೃಷ್ಣ ಇವರಿಗೆ ದಿಃ21.8.2017ರಂದು ನಾನು ಖರೀದಿ ಮಾಡಿದ್ದ ಮೂವತ್ತು ಗುಂಟೆ ಜಮೀನಲ್ಲಿ 0.12.55 ಗುಂಟೆ ಜಮೀನನ್ನು ಮಾರಾಟ ಮಾಡಿ ಒಂದು ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದೆನು ಎಂದರೆ ಸರಿ. ದಿಃ25.01.2016ರಂದು ಒಬ್ಬ ಬಿ.ಎ ಗಣೇಶ್ ಎನ್ನುವವರಿಗೆ 0.17.45 ಗುಂಟೆ (19,000 ಚದರ ಅಡಿ) ಜಮೀನನ್ನು ಮಾರಾಟ ಮಾಡಿ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ.

2. ಈಗ ತೋರಿಸುತ್ತಿರುವಂತಹ ದಾಖಲೆಯು ನಾನು ಗಣೇಶ್ ಇವರಿಗೆ ಬರೆದುಕೊಟ್ಟಿರುವ ಕ್ರಯದ ಕರಾರುಪತ್ರ ಆಗಿರುತ್ತದೆ. ಸಾಕ್ಷಿಯು ನೋಡಿ ಗುರುತಿಸಿ ಒಪ್ಪಿಕೊಂಡಿರುವಂತಹ ಒಂದು ಕ್ರಯದ ಕರಾರುಪತ್ರದ ದೃಡೀಕೃತ ಪ್ರತಿಯನ್ನು ನಿಪಿಃ16 ಎಂದು ಗುರುತಿಸಲಾಯಿತು. ದಿಃ9.10.2015ರಂದು ಒಬ್ಬ ಇಂದಿರಾರೆಡ್ಡಿ ಎನ್ನುವವರಿಗೆ 10,000 ಚದರ ಅಡಿ ಜಾಗವನ್ನು ಮಾರಾಟ

ಮಾಡಿ ಕ್ರಯದ ಕರಾರುತಪ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಈಗ ತೋರಿಸುತ್ತಿರುವಂತಹ ದಾಖಲೆಯು ನಾನು ಇಂದಿರಾರೆಡ್ಡಿ ಇವರಿಗೆ ಬರೆದುಕೊಟ್ಟಿರುವ ಕ್ರಯದ ಕರಾರುಪತ್ರ ಆಗಿರುತ್ತದೆ. ಸಾಕ್ಷಿಯು ನೋಡಿ ಗುರುತಿಸಿ ಒಪ್ಪಿಕೊಂಡಿರುವಂತಹ ಒಂದು ಕ್ರಯದ ಕರಾರುಪತ್ರದ ದೃಡೀಕೃತ ಪ್ರತಿಯನ್ನು ನಿಪಿಃ17 ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಃ ಆ ಕ್ರಯದ ಕರಾರುಪತ್ರವನ್ನು ರದ್ದುಪಡಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ನಾನು ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದರಿಂದ ಮತ್ತು ಪಿರ್ಯಾದಿಯು ಖರೀದಿಸಿದ ಜಮೀನ ಕುರಿತಂತೆ ವ್ಯಾಜ್ಯ ಇರುವುದರಿಂದ ತನ್ನ ಕ್ರಯದ ಕರಾರುಪತ್ರವನ್ನು ರದ್ದುಪಡಿಸಿಕೊಳ್ಳೋಣ ಮುಂಗಡವಾಗಿ ಕೊಟ್ಟ ಹಣವನ್ನು ವಾಪಸ್ಸು ಕೊಡಿ ಎಂದು ಪಿರ್ಯಾದಿದಾರರು ನನ್ನ ಹತ್ತಿರ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಪಿರ್ಯಾದಿದಾರರು ಸೇರಿಕೊಂಡು ಒಂದು ಮೊಮೋರಾಂಡಮ್ ಅಪ್ ಅಂಡರ್‌ಸ್ಟಾಂಡಿಂಗ್ ಪತ್ರವನ್ನು ಮಾಡಿಕೊಂಡು ಅದರಂತೆ ನಾನು ಪಿರ್ಯಾದಿದಾರರಿಗೆ ಒಂದು ಕೋಟಿ ಐವತ್ಮೂರು ಲಕ್ಷ ರೂಪಾಯಿ ಕೊಡುವಂತೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಮೆಮೋರಾಂಡಮ್ ಅಪ್ ಅಂಡರ್‌ಸ್ಟಾಂಡಿಂಗ್ ಪತ್ರದಲ್ಲಿ ಒಪ್ಪಿಕೊಂಡಂತೆ ನಾನು ಕೊಡಬೇಕಾಗಿದ್ದ ರೂ.1,53,00,000-00ಗಳ ಪೈಕಿ ಭಾಗಶಃ ಹಣದ ಮರುಪಾವತಿಗಾಗಿ ಪಿರ್ಯಾದಿದಾರರಿಗೆ ಎರಡು ಚೆಕ್ಕುಗಳನ್ನು ಒಟ್ಟು ರೂ.43,00,000-00 ಗಳಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ಪಿರ್ಯಾದಿದಾರರು ನನ್ನ ವಿರುದ್ಧ ಬಾಣಸವಾಡಿ ಪೋಲೀಸ್ ಠಾಣೆಯಲ್ಲಿ ಒಂದು ದೂರನ್ನು ಕೊಟ್ಟಿದ್ದರು ಎಂದರೆ ಸರಿ. ಆ ದೂರಿನ ಮೇಲೆ ಪೋಲೀಸಿನವರು ಎನ್‌ಸಿಅರ್ ಪ್ರಕರಣ ದಾಖಲು ಮಾಡಿಕೊಂಡು ಸಿವಿಲ್ ವ್ಯಾಜ್ಯ ಆಗಿರುವುದರಿಂದ ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ಪ್ರಕರಣದಲ್ಲಿ ರಾಜಿ ಮಾತುಕತೆ ಆಗಿದ್ದು ಅದರಂತೆ ಅದೇ ದಿನ ನಾನು ದಿನಾಂಕ ಬರೆಯದೇ ಚೆಕ್ಕುಗಳನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ರಾಜಿ ಮಾತುಕತೆ ಆಗಿರುತ್ತದೆ ಎನ್ನುವ ಕುರಿತಂತೆ ಯಾವುದೇ ಪತ್ರ ಬರವಣಿಗೆ ಆಗಿರುವುದಿಲ್ಲ. ಪೋಲೀಸ್ ಠಾಣೆಯಲ್ಲಿ ನಾನು ಹೇಳುವಂತೆ ಯಾವುದೇ ರಾಜಿ

ಮಾತುಕತೆ ಆಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ಕ್ರಯದ ಕರಾರುಪತ್ರವನ್ನು ರದ್ದುಪಡಿಸುವಂತೆ ಯಾವತ್ತೂ ಕೇಳಿಕೊಂಡಿರುವುದಿಲ್ಲ ಕೇವಲ ಪೆದ್ದಾರೆಡ್ಡಿಯವರಿಂದ ಹಣ ಹೊಡೆಯುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು ತಾವು ಚೆಕ್ಕುಗಳನ್ನು ಬ್ಯಾಂಕ್‌ಗೆ ಹಾಜರುಪಡಿಸುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿಸಿದ್ದ ಒಟ್ಟು ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿ ಕ್ರಯದ ಕರಾರಪತ್ರಗಳನ್ನು ಬರೆದುಕೊಟ್ಟಿದ್ದರೂ ಪೆದ್ದಾರೆಡ್ಡಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು.

ಬೆಂಗಳೂರು.